2020 ಕ.ತೀ.ವ 1514

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ
## ಹಾಗೂ
## ಸನ್ಮಾನ್ಯ ನ್ಯಾಯಮೂರ್ತಿ ಡಾ॥ ಹೆಚ್.ಬಿ. ಪ್ರಭಾಕರ ಶಾಸ್ತ್ರಿ

**ಜಯಂತ್ ಹಾಗೂ ಇತರರು -ವಿರುದ್ಧ- ಕರ್ನಾಟಕ ರಾಜ್ಯ, ಬನ್ನೇರುಘಟ್ಟ ಪೋಲೀಸ್ ಠಾಣೆ***

ದಂಡ ಪ್ರಕ್ರಿಯಾ ಸಂಹಿತೆ ಪ್ರಕರಣ 389

ಪ್ರಸ್ತುತ ಮಧ್ಯಂತರ ಅರ್ಜಿಯಲ್ಲಿ ಶಿಕ್ಷೆಯ ಅಮಾನತು ಮತ್ತು ಜಾಮೀನು ಕುರಿತು ಪುನಃ ಅರ್ಜಿ ಸಲ್ಲಿಸುವಿಕೆ ಕುರಿತು **(doctrine of judicial discipline)** ತತ್ವದ ಮೇಲೆ ಆದೇಶ.

ಕಾನೂನಿನ ಅಲ್ಪ ಶಿಕ್ಷೆಯ ಅಮಾನತು ಮತ್ತು ಜಾಮೀನು ಕುರಿತು ಪದೇ ಪದೇ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಅಡೆತಡೆ ಇಲ್ಲದ್ದಾಗಿಯೂ ಅಂತಹ ಅರ್ಜಿಗಳನ್ನು ಪರಿಗಣಿಸದ ನ್ಯಾಯಾಂಗ ಶಿಸ್ತು ಕುರಿತು ನ್ಯಾಯಾಂಗವು ಚರ್ಚಿಸಿ ಅಂತಹ ಅರ್ಜಿಗಳೂ ಈ ಪ್ರಕರಣದಲ್ಲಿ ಸಲ್ಲಿಸಿರುವುದು ವೇದಿಕೆ ಬೇಟೆ **(forum hunting)** ಪ್ರಕರಣ ಎನಿಸುತ್ತದೆ. ಯಾವುದೇ ಬದಲಾದ ಸನ್ನಿವೇಶ ಇಲ್ಲದ ಸಂದರ್ಭದಲ್ಲಿ ಅಂತಹ ಅರ್ಜಿಯು, ನ್ಯಾಯಾಂಗ ಶಿಸ್ತನ್ನು ಉಲ್ಲಂಘಿಸುತ್ತದೆ ಎಂದು ಈ ಮಧ್ಯಂತರ ಆದೇಶದಲ್ಲಿ ತೀರ್ಮಾನಿಸಲಾಗಿದೆ. (ಪ್ಯಾರಾಗಳು 14 ಮತ್ತು 19)

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. ಎಲ್‌ಎಡಬ್ಲ್ಯೂಎಸ್(ಎಸ್‌ಸಿ)-2006-11-93 ವಿಕ್ರಮ್‌ಜಿತ್ ಸಿಂಗ್ @ ವಿಕಿ -ವಿರುದ್ಧ- ಪಂಜಾಬ್ ರಾಜ್ಯ* | *(ಉಲ್ಲೇಖ) 12* |

*ಕ್ರಿಮಿನಲ್ ಅಪೀಲು ಸಂಖ್ಯೆ: 1620/2018, ದಿನಾಂಕ: 7ನೇ ಮಾರ್ಚ್, 2019.

*2. ಎಐಆರ್ 1978 ಎಸ್‌ಸಿ 527*
*ಬಾಬು ಸಿಂಗ್ ಹಾಗೂ ಇತರರು –ವಿರುದ್ಧ–*
*ಉತ್ತರ ಪ್ರದೇಶ ರಾಜ್ಯ (ಉಲ್ಲೇಖ) 14*
*3. (2007) 1 ಎಸ್‌ಸಿಸಿ 242*
*ಚೆನ್ನ ಬೋಯಣ್ಣ ಕೃಷ್ಣ ಯಾದವ್ –ವಿರುದ್ಧ–*
*ಮಹಾರಾಷ್ಟ್ರ ರಾಜ್ಯ ಮತ್ತು ಮತ್ತೊಬ್ಬರು (ಉಲ್ಲೇಖ) 15*
*4. ಎಲ್‌ಎಡಬ್ಲ್ಯುಎಸ್(ಎಸ್‌ಸಿ)–2004–9–9*
*ಕಿಶೋರಿ ಲಾಲ್ –ವಿರುದ್ಧ– ರೂಪಾ (ಉಲ್ಲೇಖ) 16*
*5. ಎಐಆರ್ 2005 ಎಸ್‌ಸಿ 921*
*ಕಲ್ಯಾಣ್ ಚಂದ್ರ ಸರ್ಕಾರ್ ಹಾಗೂ ಇತರರು*
*–ವಿರುದ್ಧ– ರಾಜೇಶ್ ರಂಜನ್ ಅಲಿಯಾಸ್*
*ಪಪ್ಪು ಯಾದವ್ ಹಾಗೂ ಮತ್ತೊಬ್ಬರು (ಉಲ್ಲೇಖ) 18*

ಅರ್ಜಿದಾರರ ಪರ : ಶ್ರೀ ಎನ್.ಟಿ. ನಾಣಯ್ಯ, ಹಿರಿಯ ವಕೀಲರು;
ಪ್ರತ್ಯರ್ಜಿದಾರರ ಪರ : ಶ್ರೀ ವಿಜಯ್ ಕುಮಾರ್ ಮಜಗೆ, ಹೆಚ್ಚುವರಿ ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್.

**ನ್ಯಾಯಮೂರ್ತಿ ಡಾ: ಹೆಚ್.ಬಿ. ಪ್ರಭಾಕರ ಶಾಸ್ತ್ರಿ:**

## ವಾದಕಾಲೀನ ಅರ್ಜಿ ಸಂಖ್ಯೆ: 2/2018 ಕ್ಕೆ ಸಂಬಂಧಿಸಿದ ಆಜ್ಞೆ

ವಾದಕಾಲೀನ ಅರ್ಜಿ ಸಂ.2/2018ನ್ನು ದಂಡ ಪ್ರಕ್ರಿಯಾ ಸಂಹಿತೆ 1973 (ಇಲ್ಲಿ ಇನ್ನು ಮುಂದೆ ಸಂಕ್ಷಿಪ್ತತೆಗಾಗಿ 'ದಂ.ಪ್ರ.ಸಂ' ಯೆಂದು ಉಲ್ಲೇಖಿಸಲಾಗಿದೆ)ರ 389ನೇ ಪ್ರಕರಣದ ಮೇರೆಗೆ ಸಲ್ಲಿಸಲಾಗಿದ್ದು, ಅಪೀಲಿನ ಮೇರೆಗೆ ಅಮಾನತು ಶಿಕ್ಷೆಯನ್ನು ವಜಾಮಾಡಲು ಹಾಗೂ ಅಪೀಲುದಾರರ ಜಾಮೀನನ್ನು ವಿಸ್ತರಿಸಲು ಕೋರಲಾಗಿದೆ.

2. ಈ ವಾದಕಾಲೀನ ಅರ್ಜಿಯಲ್ಲಿನ ಅರ್ಜಿದಾರರು ಮುಖ್ಯ ವಿಷಯದಲ್ಲಿ ಅಪೀಲುದಾರರಾಗಿದ್ದು, ಇವರು ಎಸ್.ಸಿ.ಸಂ.5057/2013 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ (ಆನೇಕಲ್‌ನಲ್ಲಿ ಪೀಠಾಸೀನ) ಯ ಮಾನ್ಯ IIIನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹೊರಡಿಸಿದ ತಮ್ಮ ಅಪರಾಧ ನಿರ್ಣಯವನ್ನು ಪ್ರಶ್ನಿಸಿದ್ದು, ಇವರನ್ನು ಭಾರತ ದಂಡ ಸಂಹಿತೆ, 1860ರ 34ನೇ ಪ್ರಕರಣದೊಂದಿಗೆ ಓದಲಾದ 324, 326 ಹಾಗೂ 307ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ದಿನಾಂಕ: 30.08.2018ರ ತಮ್ಮ ತೀರ್ಪಿನ ಮೂಲಕ ಅಪರಾಧಗಳೆಂದು ನಿರ್ಣಯಿಸಲಾಗಿದೆ ಹಾಗೂ ತದನುಸಾರವಾಗಿ ಅವರಿಗೆ ಶಿಕ್ಷೆ ವಿಧಿಸಲಾಗಿದೆ.

3. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ವಕೀಲರು ಹಾಗೂ ಮಾನ್ಯ ರಾಜ್ಯ ಸರ್ಕಾರಿ ವಕೀಲರ ವಾದಗಳನ್ನು ಆಲಿಸಿದ್ದೇವೆ. ಅಧೀನ ನ್ಯಾಯಾಲಯ ದಾಖಲೆಯನ್ನೂ ಒಳಗೊಂಡಂತೆ ಈ ನ್ಯಾಯಾಲಯದ ಮುಂದೆ ಇಡಲಾದ ಸಾಕ್ಷ್ಯಾಧಾರಗಳನ್ನು ಅವಗಾಹಿಸಲಾಗಿದೆ.

4. ಲಭ್ಯ ಸಾಕ್ಷ್ಯಾಧಾರಗಳಿಂದ ಕಲೆ ಹಾಕಬಹುದಾದಂಥ ಪ್ರಾಸಿಕ್ಯೂಷನ್‌ನ ಸಂಕ್ಷಿಪ್ತ ವಾದವೇನೆಂದರೆ, 24.03.2011 ರಂದು ಮಧ್ಯರಾತ್ರಿ 12.30 ರಲ್ಲಿ, ಕಗ್ಗಲಿಪುರ ರಸ್ತೆ, ಶನೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ಹಳೆ ದ್ವೇಷದ ಕಾರಣದಿಂದ, ಆಪಾದಿತನು ಸಿ.ಡಬ್ಲ್ಯೂ.1–ಶ್ರೀ ವೆಂಕಟೇಶ್‌ರೊಟ್ಟಿಗೆ ಜಗಳವಾಡಿದ್ದಾನೆ ಹಾಗೂ ಅವನ ಕೊಲೆಯನ್ನು ಮಾಡುವ ಸಲುವಾಗಿ, ಸದರಿ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು 1ನೇ ಸಂಖ್ಯೆಯ ಆಪಾದಿತನು ಅವನ ಕುತ್ತಿಗೆಗೆ ಚಾಕುವಿನಿಂದ ಚುಚ್ಚಿದ್ದು, 2ನೇ ಸಂಖ್ಯೆಯ ಆಪಾದಿತನು, ತನ್ನ ಎಡಗೈಯಿಂದ ಅದೇ ಚಾಕುವಿನಿಂದ ಇರಿದಿದ್ದು, 3ನೇ ಸಂಖ್ಯೆಯ ಆಪಾದಿತನು ಅವನ ದೇಹದ ಎಲ್ಲಾ ಭಾಗಕ್ಕೆ ಅದೇ ಚಾಕುವಿನಿಂದ ಇರಿದಿದ್ದು, ತದನಂತರ, 1ನೇ ಸಂಖ್ಯೆಯ ಆಪಾದಿತನು ಅವನ ಎಡಗೈನಿಂದ ಅದೇ ಚಾಕುವಿನಿಂದ 3–4 ಬಾರಿ ಇರಿದಿದ್ದು, ಇದರಿಂದ ತೀವ್ರತರವಾದ ಗಾಯಗಳಾಗಿದ್ದು, ಅವನ ಕೊಲೆಗೆ ಪ್ರಯತ್ನ ನಡೆದಿದೆ.

5. ಒಪ್ಪಿಕೊಂಡಿರುವ ಹಾಗೆ ಈ ವಿಷಯದಲ್ಲಿ, ಇದೇ ಪ್ರಸ್ತುತ ಅರ್ಜಿದಾರರು ಸಲ್ಲಿಸಿದ ಸದೃಶ ಅರ್ಜಿಯನ್ನು, ಎರಡೂ ಕಡೆಗಳಿಂದ ಆಲಿಸಿದ ನಂತರ, ದಿನಾಂಕ 25.09.2018 ರ ಸವಿವರವಾದ ಆದೇಶದ ಮೂಲಕ ಈ ನ್ಯಾಯಾಲಯವು ವಜಾಗೊಳಿಸಿತ್ತು. ಅಂತೆಯೇ ಪರಿಗಣನೆಯಲ್ಲಿರುವ ಈ ಅರ್ಜಿಯನ್ನು, ಈ ಅಪೀಲಿನ ಮೇರೆಗೆ ಪ್ರಶ್ನಿಸಲಾದ ಅಮಾನತು ಶಿಕ್ಷೆಯು ಇದೇ ರೀತಿಯ ಪರಿಹಾರಕ್ಕಾಗಿ ಇದೇ ಅರ್ಜಿದಾರರು ಎರಡನೇ ಸಾದೃಶ್ಯ ಅರ್ಜಿಯನ್ನು ಸಲ್ಲಿಸಿರುವುದಾಗಿದೆ.

6. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ವಕೀಲರು ತಮ್ಮ ವಾದಗಳಲ್ಲಿ, ಈ ನ್ಯಾಯಾಲಯವು, ಈ ಮೊದಲಿನ ಸಂದರ್ಭದಲ್ಲಿ, ಪ್ರಾ.ಸಾ.6, 7 ಹಾಗೂ 8 ಆಗಿರುವ ಘಟನೆಗೆ ಪ್ರಮುಖ ಆಪಾದಿತ ಸಾಕ್ಷಿದಾರರು, ಒಟ್ಟಾರೆಯಾಗಿ ಪ್ರಾಸಿಕ್ಯೂಷನ್‌ನ ವಾದವನ್ನು ಮೀರಿರುತ್ತವೆ. ಏಕೆಂದರೆ ಅವರು ಪ್ರತಿಕೂಲ ಸಾಕ್ಷ್ಯವಾಗಿದ್ದು ಇನ್ನೂ ಅವರ ಸಾಕ್ಷ್ಯವನ್ನು ಅವಲಂಬಿಸಿತ್ತು ಹಾಗೂ ಅಪೀಲುದಾರರ ಮೊದಲಿನ ಜಾಮೀನು ಅರ್ಜಿಯನ್ನು ತಿರಸ್ಕರಿಸುವಲ್ಲಿ ಈ ನ್ಯಾಯಾಲಯವು ಸರಿಯಾಗಿ ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯವನ್ನು ಪರಿಗಣಿಸಿದೆ. ಮಾನ್ಯ ಹಿರಿಯ ವಕೀಲರೂ ಕೂಡ, ಆಪಾದಿತನ ಕಡೆಯಿಂದಾದ ಆಪಾದಿತ ಘಟನೆಯಲ್ಲಿ ಒಟ್ಟಾರೆಯಾಗಿ ಉದ್ದೇಶದ ಕೊರತೆಯಿರುವುದರಿಂದ ಭಾರತ ದಂಡ ಸಂಹಿತೆಯ 307ನೇ ಪ್ರಕರಣವನ್ನು ಅನ್ವಯಿಸಲು ಸಾಕ್ಷ್ಯಾಧಾರ ಇಲ್ಲವೆಂದು ನಿವೇದಿಸಿದ್ದಾರೆ. ಈ ನ್ಯಾಯಾಲಯವು ಮೊದಲಿನ ಆದೇಶದಲ್ಲಿ, ಸದೃಶ ಅರ್ಜಿಯನ್ನು ತಿರಸ್ಕರಿಸುವಾಗ, ಅಪೀಲುದಾರರು ಆಜೀವ ಕಾರಾವಾಸ ಶಿಕ್ಷೆಗೊಳಪಡಿಸುವ ಕಾರಣ ಮಾತ್ರ ಎತ್ತಿಹಿಡಿದಿದೆ. ಅಷ್ಟೇ ಅಲ್ಲದೆ, ಮಾನ್ಯ ವಕೀಲರು, ಅಧೀನ ನ್ಯಾಯಾಲಯ ದಾಖಲೆಗಳನ್ನು ಅವಲೋಕಿಸದೆ, ಮೊದಲಿನ ಅರ್ಜಿಯನ್ನು ಈ ನ್ಯಾಯಾಲಯವು ವಿಲೇವಾರಿಮಾಡಿದೆ, ಹಾಗೆಯೇ, ಈ ನ್ಯಾಯಾಲಯದ ತೀರ್ಪನ್ನು ಇದು ಪುನರ್‌ಪರಿಶೀಲಿಸದಿರುವುದರಿಂದ ಈ ಪರಿಹಾರಕ್ಕೆ ಸದೃಶ ಅರ್ಜಿಯನ್ನು ಪರಿಗಣಿಸಲು ಈ ನ್ಯಾಯಾಲಯಕ್ಕೆ ಪ್ರತಿಷೇಧವಿರುವುದಿಲ್ಲವೆಂದು ನಿವೇದಿಸಿದ್ದಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಕೆಲವು ತೀರ್ಪುಗಳನ್ನು ತಮ್ಮ ಸಮರ್ಥನೆಯಲ್ಲಿ ಉದ್ಧರಿಸಿದ್ದು, ಈ ಆದೇಶದಲ್ಲಿ

ನಂತರದ ಭಾಗದಲ್ಲಿ ಪರಿಗಣಿಸಲಾಗಿರುತ್ತದೆ, ಮಾನ್ಯ ಹಿರಿಯ ವಕೀಲರು, ಅರ್ಜಿದಾರರು ಜಾಮೀನನ್ನು ವಿಸ್ತರಿಸುವ ಸಂಬಂಧ ಸಾಕಷ್ಟು ಆಧಾರಗಳನ್ನು ನೀಡಿದ್ದಾರೆಂದು ನಿವೇದಿಸಿದ್ದಾರೆ.

7. ಮಾನ್ಯ ವಿಶೇಷ ಸರ್ಕಾರಿ ವಕೀಲರು, ತಮ್ಮ ಸಂಕ್ಷಿಪ್ತ ವಾದಗಳಲ್ಲಿ, ಒಮ್ಮೆ ಈ ನ್ಯಾಯಾಲಯವು, ಇದೇ ಅರ್ಜಿದಾರರು ಸಲ್ಲಿಸಿದ ಸದೃಶ ಅರ್ಜಿಯನ್ನು ಅದರ ಗುಣಾರ್ಹತೆಗಳ ಮೇಲೆ ಪರಿಗಣಿಸಿದೆ ಹಾಗೂ ಸವಿವರವಾದ ಪರಿಗಣಿತ ಆದೇಶವನ್ನು ಹೊರಡಿಸಿದೆಯೆಂದು ನಿವೇದಿಸಿದ್ದಾರೆ. ಈ ನ್ಯಾಯಾಲಯವು, ನ್ಯಾಯಾಲಯದ ಮುಂದೆ ಇಟ್ಟಿರುವ ಸನ್ನಿವೇಶದಲ್ಲಿ ಯಾವುದೇ ಬದಲಾವಣೆ ಅಥವಾ ಹೊಸ ಸಾಕ್ಷ್ಯಾಧಾರ ಇಲ್ಲದೆ ಇದೇ ಆಧಾರಗಳ ಮೇಲೆ ಸದೃಶ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಅಷ್ಟೇ ಅಲ್ಲದೆ, ಅವರು, ಈ ನ್ಯಾಯಾಲಯವು, ತನ್ನ ಮೊದಲಿನ ಆದೇಶದ ಮೇಲೆ ಅಪೀಲು ನ್ಯಾಯಾಲಯದಂತೆ ಪೀಠಾಸೀನವಾಗುವುದಿಲ್ಲ ಹಾಗೂ ಅದರ ಮೂಲಕ ನೀಡಲಾದ ಕಾರಣಗಳನ್ನು ಮರು–ವಿವೇಚನೆ ಮಾಡಲಾಗುವುದಿಲ್ಲವೆಂದು ನಿವೇದಿಸಿದ್ದಾರೆ. ಹಾಗೆಯೇ, ಈ ನ್ಯಾಯಾಲಯವು ಮೊದಲಿನ ತಮ್ಮ ಅರ್ಜಿಯನ್ನು ವಜಾಮಾಡಿದ ಆದೇಶದಿಂದ ಅವರು ನಿಜವಾಗಿಯೂ ಬಾಧಿತರಾದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೊರೆಹೋಗುವುದು ಅರ್ಜಿದಾರರಿಗೆ ಇರುವ ಒಂದೇ ಪರಿಹಾರವಾಗಿದೆ.

8. ಈ ನ್ಯಾಯಾಲಯವು, ಇದೇ ಅರ್ಜಿದಾರರು ಸಲ್ಲಿಸಿದ ಸದೃಶ ಅರ್ಜಿಯನ್ನು ತಿರಸ್ಕರಿಸುವಾಗ, ಇತರ ವಿಷಯಗಳ ನಡುವೆ ದಿನಾಂಕ: 25.09.2018ರ ತನ್ನ ಆದೇಶದ ಮೂಲಕ ಈ ಮುಂದಿನ ಅಭಿಪ್ರಾಯಪಟ್ಟಿದೆ:

> *"ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಸಂತ್ರಸ್ತ ಹಾಗೂ ಪ್ರತ್ಯಕ್ಷ ಸಾಕ್ಷಿದಾರರನ್ನು ಪ್ರಾಸಿಕ್ಯೂಷನ್ನು ವಿಚಾರಣೆ ಮಾಡಿದೆ. ಪ್ರಮುಖವಾಗಿ, ಪ್ರಾ.ಸಾ.6 ಹಾಗೂ 7, ಪ್ರಾಸಿಕ್ಯೂಷನ್‌ನ ವಾದವನ್ನು ಪ್ರಾರಂಭದಲ್ಲಿ ತಮ್ಮ ಪಾಟೀ–ಸವಾಲಿನ ಅವಧಿಯಲ್ಲಿ*

ಬೆಂಬಲಿಸಿದರೂ ಕೂಡ, ಅವರು, ಮುಂಚಿನ ಹೇಳಿಕೆಯಿಂದ ಹಿಂದೆ ಸರಿದಿದ್ದಾರೆ, ಈ ಕಾರಣದಿಂದ, ಅಪೀಲುದಾರರ ವಿರುದ್ಧ ಮಾಡಲಾದ ಆರೋಪಗಳನ್ನು ರುಜುವಾತುಪಡಿಸುವಲ್ಲಿ ಆರೋಪಕ್ಕೊಳಪಡಿಸುವ ಯಾವುದೇ ಸಾಕ್ಷ್ಯಾಧಾರ ಇರುವುದಿಲ್ಲವೆಂದು ನಿವೇದಿಸಿದ್ದಾರೆ. ಮಾನ್ಯ ವಕೀಲರು, ಪ್ರಾ.ಸಾ.6 ರ ಪಾಟೀ–ಸವಾಲಿನ ಭಾಗದ ಮೂಲಕ ನಮಗೆ ತಿಳಿಯಪಡಿಸಿದ್ದು, ಇದರಲ್ಲಿ, ಸಾಕ್ಷಿದಾರನು, ಅದು ನಡೆಯುವ ಸಮಯದಲ್ಲಿ, ತಾನು ಸಂಪೂರ್ಣವಾಗಿ ಕುಡಿದಿದ್ದೆನೆಂದು, ಆದುದರಿಂದ ಆಕ್ರಮಣಕಾರರು ತನಗೆ ಗೊತ್ತಿಲ್ಲವೆಂದು ಹೇಳಿರುತ್ತಾನೆ.

ಪ್ರಶ್ನಿತ ತೀರ್ಪಿನ ಅವಗಾಹನೆಯು, ಗಾಯಗೊಂಡವನು ಆಸ್ಪತ್ರೆಯಲ್ಲಿ ನೀಡಿದ ಹೇಳಿಕೆಯನ್ನಾಧರಿಸಿ ಪ್ರಥಮ ಮಾಹಿತಿ ವರದಿಯನ್ನು ದಾಖಲುಮಾಡಿರುವುದನ್ನು ವಿವರಿಸುತ್ತದೆ. ಪ್ರಾ.ಸಾ.6 ಹಾಗೂ 7 ರ ಒಪ್ಪಿಗೆಗಳು ಹಾಗೂ ವೈದ್ಯಕೀಯ ಅಧಿಕಾರಿಯ ಸಾಕ್ಷ್ಯವನ್ನು ಪರಿಗಣನೆಗೆ ತೆಗೆದುಕೊಂಡು ಅಧಿವಿಚಾರಣಾ ನ್ಯಾಯಾಲಯವು, ಪ್ರಾಸಿಕ್ಯೂಷನ್ನು ತಿಳಿಸಿದಂತೆ ಅಪರಾಧ ನಡೆದಿದೆಯೆಂದು ಅಭಿಪ್ರಾಯಪಟ್ಟಿದೆ. ಅಧಿವಿಚಾರಣಾ ನ್ಯಾಯಾಲಯವು ನಿರ್ದಿಷ್ಟವಾಗಿ ಪ್ರಾ.ಸಾ.6 ಹಾಗೂ 7 ಇವರನ್ನು ಆಪಾದಿತ ವ್ಯಕ್ತಿಗಳು ಒಲಿಸಿಕೊಂಡಿದ್ದರು ಎಂಬ ಸಂಗತಿಯನ್ನು ಗಮನಕ್ಕೆ ತೆಗೆದುಕೊಂಡಿದೆ ಆದುದರಿಂದ (2013) 11 ಎಸ್‌ಸಿಸಿ 546 ರಲ್ಲಿ ವರದಿಯಾಧ ಗುಡು ರಾಮ್ –ವಿರುದ್ಧ– ಹಿಮಾಚಲ ಪ್ರದೇಶ ರಾಜ್ಯ ಮೊಕದ್ದಮೆಯ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ಮೇಲೆ ಅವಲಂಬಿತವಾಗಿದೆ. ಮಾನ್ಯ ಸತ್ರ ನ್ಯಾಯಾಧೀಶರು, ಮೇಲಿನ ಅಪರಾಧಗಳ ಸಂಬಂಧದಲ್ಲಿ ಅಪೀಲುದಾರರು/ಆಪಾದಿತರನ್ನು ಅಪರಾಧಿಯೆಂದು ನಿರ್ಣಯಿಸಿರುವುದನ್ನು ಯುಕ್ತವಾಗಿದೆಯೆಂದು ಕಂಡುಕೊಂಡಿದ್ದಾರೆ.

*ಅಧಿವಿಚಾರಣಾ ನ್ಯಾಯಾಲಯದಿಂದ ಸ್ವೀಕರಿಸಿದ ದಾಖಲೆಗಳನ್ನು ಪರಿಶೀಲಿಸಿದ ಮೇಲೆ, ಸದರಿ ವಿಷಯದಲ್ಲಿ ಯಾವುದೇ ವಿಭಿನ್ನ ದೃಷ್ಟಿಯನ್ನು ತಳೆದಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ. ಸಾಕ್ಷ್ಯದಲ್ಲಿರುವ ಸಂಗತಿಗಳು, ಘಟನೆಯು ಜಾತ್ರೆಯಲ್ಲಿ ನಡೆದಿದೆಯೆಂಬುದನ್ನು ತಿಳಿಸುತ್ತವೆ. ಮೊದಲಿನ ಉದಾಹರಣೆಯಲ್ಲಿ ಅಪೀಲುದಾರ ತೊಡಕಿಗೆ ಸಿಲುಕಿಕೊಂಡಿದ್ದರು ಹಾಗೂ ಅವರು ನಡೆಸಿದ ಪ್ರಕಟ ಕೃತ್ಯಗಳನ್ನು, ಪ್ರಾ.ಸಾ.6 ಹಾಗೂ 7 ತಮ್ಮ ಮುಖ್ಯ ವಿಚಾರಣೆಯಲ್ಲಿ ವಿವರಿಸಿದ್ದಾರೆ. ಅವರ ಮರು–ವಿಚಾರಣೆಯಲ್ಲಿ ಹೊರಬಿದ್ದ ಉತ್ತರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರ ಸಾಕ್ಷ್ಯವನ್ನು ಒಟ್ಟಾರೆಯಾಗಿ ತೆಗೆದುಹಾಕಿರುವುದಿಲ್ಲ. ಅಧಿವಿಚಾರಣಾ ನ್ಯಾಯಾಲಯವು, ಸಾಬೀತುಪಡಿಸಲಾಗಿರುವ ಸನ್ನಿವೇಶಗಳನ್ನು ಉಲ್ಲೇಖಿಸಿದೆ. ಆದುದರಿಂದ ಈ ಸಾಕ್ಷಿದಾರರ ಪ್ರತಿಕೂಲ ಸಾಕ್ಷ್ಯದ ಕಾರಣಮಾತ್ರದಿಂದಲೇ ಆಪಾದಿತನು ತೋರಿಸಿದ ಸ್ವಭಾವದ ಕಾರಣದಿಂದ ಈ ಅಪೀಲಿನ ಇತ್ಯರ್ಥದಲ್ಲಿರುವ ಅವಧಿಯಲ್ಲಿ ಅಧಿವಿಚಾರಣಾ ನ್ಯಾಯಾಲಯವು ನೀಡಿದ ಶಿಕ್ಷೆಯನ್ನು ರದ್ದುಮಾಡಲಾಗುವುದಿಲ್ಲ ಹಾಗೂ ಅಪೀಲುದಾರರು ಜಾಮೀನನ್ನು ಒಪ್ಪಿಕೊಳ್ಳುವುದಕ್ಕೆ ಹಕ್ಕುಳ್ಳವರಾಗಿರುವುದಿಲ್ಲ."*

9. ಈ ಮೊದಲು ಈ ನ್ಯಾಯಾಲಯವು ನೀಡಿದ ಮೇಲಿನ ತರ್ಕದ ಅವಲೋಕನವು, ಈ ನ್ಯಾಯಾಲಯವು, ತನ್ನ ಮುಂದೆ ವಾದಿಸಿದ ವಾದಗಳ ಎಲ್ಲಾ ಅಂಶಗಳನ್ನು ಪರಿಗಣಿಸಿದ್ದು, ಇದನ್ನು ಇಂದೂ ಕೂಡ ಮಾನ್ಯ ಹಿರಿಯ ವಕೀಲರು ಪುನರಾವರ್ತಿಸಿದ್ದಾರೆ. ಗಾಯಗೊಂಡ ಪ್ರತ್ಯಕ್ಷ ಸಾಕ್ಷಿದಾರನನ್ನು ಒಳಗೊಂಡಂತೆ ಪ್ರಾಸಿಕ್ಯೂಷನ್‌ನ ಕೆಲವು ಸಾಕ್ಷಿದಾರರ ಆಪಾದಿತ ಪ್ರತಿಕೂಲತೆ ಹಾಗೂ ಪ್ರಾ.ಸಾ.6 ರ ಆಪಾದಿತ ಪ್ರತಿಕೂಲತೆಯನ್ನು ಇವನು ತನ್ನ ಸಾಕ್ಷ್ಯದ ಸಮಯದಲ್ಲಿ, ತಾನು ಸಂಪೂರ್ಣವಾಗಿ ಕುಡಿದಿದ್ದೆನೆಂದು ಹೇಳಿರುವುದನ್ನು ತೋರಿಸುತ್ತಿದ್ದು, ಹಾಗೆಯೇ ತಾನು ಥಳಿಸಿದವರ ಬಗ್ಗೆ ಅರಿವಿಲ್ಲವೆಂದು ಹೇಳಿದ್ದು,

ಈ ನ್ಯಾಯಾಲಯವು ಸಹ ಇದನ್ನು ಪರಿಗಣಿಸಿದೆ ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ 389ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯೊಂದಿಗೆ ವ್ಯವಹರಿಸುತ್ತಿರುವಾಗ ಪರಿಗಣಿಸಬೇಕಾದ ಪ್ರಮುಖ ಸಂಗತಿಗಳನ್ನು ಒಳಗೊಂಡಂತೆ ಇದರ ಮುಂದೆ ಮಾಡಲಾದ ವಾದಗಳ ಎಲ್ಲಾ ಅಂಶಗಳನ್ನು ಪೂರೈಸಿದ ನಂತರ ಇದು ಪರಿಗಣಿತ ಆದೇಶವನ್ನು ಹೊರಡಿಸಿದೆ. ಹಾಗೆಯೇ, ಪ್ರಾಸಿಕ್ಯೂಷನ್ ಸಾಕ್ಷಿದಾರರ ಕೆಲವು ಪ್ರತಿಕೂಲತೆಯನ್ನು ನಿರ್ದಿಷ್ಟವಾಗಿ, ಪ್ರಾ.ಸಾ.6ನ್ನು ಈ ನ್ಯಾಯಾಲಯವು ಮೊದಲು ಪರಿಗಣಿಸಿರಲಿಲ್ಲ ಎಂಬ ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

10. ಮಾನ್ಯ ಹಿರಿಯ ವಕೀಲರ ವಾದಗಳ ಎರಡನೇ ಅಂಶವು, ಈ ನ್ಯಾಯಾಲಯಕ್ಕೆ ಮೊದಲಿನ ಅರ್ಜಿಯನ್ನು ಪರಿಗಣಿಸುತ್ತಿರುವಾಗ ಕೆಳನ್ಯಾಯಾಲಯ ದಾಖಲೆಗಳ ಪಡೆಯುವ ಅವಕಾಶ ಇರಲಿಲ್ಲ ಎಂಬುದಾಗಿದ್ದು, ಇದನ್ನು ದಿನಾಂಕ 25.09.2018 ರ ಪ್ರಸ್ತುತ ಆದೇಶದ ಕಾರಣವೆಂಬುದನ್ನು ಒಪ್ಪಿಕೊಳ್ಳಲಾಗುವುದಿಲ್ಲ, ಈ ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯವು ಸ್ವೀಕರಿಸಿದ ದಾಖಲೆಗಳನ್ನು ಪರಿಶೀಲಿಸಿದ್ದು, ಇದರ ಸಂಬಂಧ ಅಪೀಲುದಾರರ ಪರವಾಗಿ ಹಾಜರಾಗಿದ್ದ ಮಾನ್ಯ ವಕೀಲರು ಈ ನ್ಯಾಯಾಲಯದ ಗಮನವನ್ನು ಸೆಳೆದಿರುವುದು ಸ್ಪಷ್ಟವಾಗುತ್ತದೆ. ತನ್ನ ಮುಂದಿರುವ ಸಂಪೂರ್ಣ ಸಾಕ್ಷ್ಯಾಧಾರಗಳನ್ನು ಅವಗಾಹಿಸಿದ ನಂತರ, ಈ ನ್ಯಾಯಾಲಯವು ಪರಿಗಣಿತ ಹಾಗೂ ಯುಕ್ತ ಆದೇಶವನ್ನು ಹೊರಡಿಸಿದೆ. ಆದುದರಿಂದ, ಮಾನ್ಯ ಹಿರಿಯ ವಕೀಲರ ಎರಡನೇ ವಾದವನ್ನು ಸಹ ಒಪ್ಪಿಕೊಳ್ಳಲಾಗುವುದಿಲ್ಲ.

11. ವಾದದ ಮೂರನೇ ಅಂಶವು, ಈ ನ್ಯಾಯಾಲಯವು, ಅರ್ಜಿದಾರರು/ ಅಪೀಲುದಾರರು ಆಜೀವ ಕಾರಾವಾಸ ಶಿಕ್ಷೆಗೆ ಒಳಗಾಗಿರುವುದರಿಂದ ಅವರು ಜಾಮೀನಿಗೆ ಹಕ್ಕುಳ್ಳವರಾಗಿರುವುದಿಲ್ಲ ಎಂಬ ಭಾವನೆಯಿಂದ ಮೈಮರೆತಿದೆ ಎಂಬುದಾಗಿದೆ, ಅಲ್ಲದೆ, ಇಲ್ಲಿ ಅರ್ಜಿದಾರರು ಮಾಡಿಕೊಂಡ ಸ್ವಕಲ್ಪಿತದಂತೆಯೂ

ಪರಿಗಣಿಸಬೇಕಾಗಿದೆ. ದಿನಾಂಕ 25.09.2018 ರ ಆದೇಶವು ಇಲ್ಲಿ ಈಗ ಅಂಥ ಅಭಿಪ್ರಾಯವನ್ನು ಪ್ರಕಟಪಡಿಸುವುದಿಲ್ಲವೆಂಬುದು ನಮ್ಮ ಅಭಿಪ್ರಾಯವಾಗಿದೆ.

12. ***ವಿಕ್ರಮ್‌ಜಿತ್ ಸಿಂಗ್ @ ವಿಕಿ –ವಿರುದ್ಧ– ಪಂಜಾಬ್ ರಾಜ್ಯ***[1] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಮಾನ್ಯ ಹಿರಿಯ ವಕೀಲರು ಅವಲಂಬಿಸಿದ್ದಾರೆ ಹಾಗೂ ಸದರಿ ತೀರ್ಪಿನ 21 ರಿಂದ 24ನೇ ಸಂಖ್ಯೆಗೆ ನಮ್ಮ ಗಮನವನ್ನು ಸೆಳೆದಿದ್ದು, ನಮ್ಮ ಮುಂದಿರುವ ಪ್ರಕರಣದಲ್ಲಿಯೂ ಕೂಡ ಅಧಿವಿಚಾರಣಾ ನ್ಯಾಯಾಲಯವು ಪ್ರಾ.ಸಾ.6ನ್ನು ಒಳಗೊಂಡಂತೆ ಮುಖ್ಯ ಸಾಕ್ಷಿದಾರರ ಪಾಟೀ–ಸವಾಲಿನ ಸಂಪೂರ್ಣ ಪರಿಶೀಲನೆಯನ್ನು ನಡೆಸಿದ್ದು, ದಿನಾಂಕ: 25.09.2018ರ ಮೊದಲಿನ ತನ್ನ ಆದೇಶದಲ್ಲಿ ಈ ನ್ಯಾಯಾಲಯವನ್ನು ಪರಿಗಣಿಸಿರುವುದಿಲ್ಲ. ಹಾಗೆಯೇ, ಪ್ರಸ್ತುತ ಅರ್ಜಿಯನ್ನು ಸಲ್ಲಿಸಲಾಗಿದೆ.

ಮಾನ್ಯ ಹಿರಿಯ ವಕೀಲರು ಅವಲಂಬಿಸಿದ್ದ ಸದರಿ ತೀರ್ಪಿಗೆ ಹೆಚ್ಚಿನ ಮಾನ್ಯತೆ ನೀಡುತ್ತಾ, ಈ ಕಂಡಿಕೆಗಳ ಕಡೆಗೆ, ಸದರಿ ತೀರ್ಪಿನಲ್ಲಿ ಅದರಲ್ಲೂ ನಿರ್ದಿಷ್ಟವಾಗಿ 21 ರಿಂದ 24ನೇ ಸಂಖ್ಯೆಗಳ ಕಂಡಿಕೆಗಳಿಗೆ ನಮ್ಮ ಗಮನವನ್ನು ಸೆಳೆದಿದ್ದು ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಪರಿಗಣಿಸಿದ ನಂತರ, ಪ್ರಕರಣಕ್ಕೆ ಮಿತಿಗೊಳಪಡಿಸಿದ ನಂತರ ಯಾವುದೇ ಇತರ ಪ್ರಕರಣದಲ್ಲಿ ಅವರು ಬಯಸಿದ್ದ ಹೊರತು ಆಪಾದಿತನ ಬಿಡುಗಡೆ ಆದೇಶಕ್ಕೆ ಇಚ್ಛಿಸಿತ್ತು ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

13. ನಮ್ಮ ಮುಂದಿರುವ ಪ್ರಕರಣದಲ್ಲಿ ಈ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 389ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಪರಿಗಣಿಸುವ ಉದ್ದೇಶಕ್ಕಾಗಿ ತನ್ನ ಮುಂದೆ ಇದ್ದ ಸಾಕ್ಷ್ಯಾಧಾರಗಳನ್ನು ವಿವೇಚಿಸಿರುವುದರಿಂದ, ನಾವು, ಈ ನ್ಯಾಯಾಲಯವು, ದಿನಾಂಕ 25.09.2018 ಕ್ಕೂ ಮೊದಲು ನೀಡಿದ ವಾಸ್ತವಾಂಶಕ್ಕೆ

1. ಎಲ್‌ಎಡಬ್ಲ್ಯೂಎಸ್(ಎಸ್‌ಸಿ)–2006–11–93

ನ್ಯಾಯಿಕ ವಿವೇಚನೆಯನ್ನು ಅನ್ವಯಿಸಿಲ್ಲ ಎಂಬ ಯಾವುದೇ ಕಾರಣವನ್ನು ನಾವು ಗುರುತಿಸಿರುವುದಿಲ್ಲ.

14. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ವಕೀಲರು, ***ಬಾಬು ಸಿಂಗ್ ಹಾಗೂ ಇತರರು –ವಿರುದ್ಧ– ಉತ್ತರ ಪ್ರದೇಶ ರಾಜ್ಯ***[2] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ತೀರ್ಪನ್ನು ಅವಲಂಬಿಸಿದ್ದಾರೆ ಹಾಗೂ ಸದರಿ ತೀರ್ಪಿನ 2 ಹಾಗೂ 24ನೇ ಕಂಡಿಕೆಯ ಭಾಗಕ್ಕೆ ನಮ್ಮ ಗಮನವನ್ನು ಸೆಳೆದಿದ್ದು, ಇದರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಜಾಮೀನಿನ ಅರ್ಜಿಯನ್ನು ತಿರಸ್ಕರಿಸುವ ಆದೇಶವು ಅಗತ್ಯವಾಗಿ ಮತ್ತೊಂದನ್ನು ಪ್ರತಿರೋಧಿಸುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದು, ನಂತರದ ಸಂದರ್ಭದಲ್ಲಿ, ಹೆಚ್ಚಿನ ಬೆಳವಣಿಗೆಗಳು ಹಾಗೂ ವಿಭಿನ್ನ ಪರಿಗಣನೆಗಳನ್ನು ನಿಡಿರುತ್ತದೆ. 24ನೇ ಸಂಖ್ಯೆಯ ಕಂಡಿಕೆಯಲ್ಲಿ, ಆಜೀವ ಕಾರಾವಾಸ ಶಿಕ್ಷೆಗೊಳಗಾಗಿರುವ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡದಿರುವ ಅಭ್ಯಾಸವನ್ನು ಉಚ್ಚ ನ್ಯಾಯಾಲಯಗಳಲ್ಲಿ ಬೆಳೆಸಲಾಗಿತ್ತು ಹಾಗೂ ಮಾನ್ಯ ಉಚ್ಚ ನ್ಯಾಯಾಲಯವು, ಒಬ್ಬ ವ್ಯಕ್ತಿಯು ಒಮ್ಮೆ ತಪ್ಪಿತಸ್ಥನೆಂದು ಕಂಡುಬಂದ ಹಾಗೂ ಆಜೀವ ಕಾರಾವಾಸ ಶಿಕ್ಷೆಗೆ ಒಳಗಾಗಿರುವನು ಎಂಬ ಆಧಾರದ ಮೇಲೆ ಅವನನ್ನು ಬಿಟ್ಟುಬಿಡಬಾರದು ಹಾಗೆಯೇ, ಅವನ ಅಪರಾಧ ನಿರ್ಣಯವನ್ನು ಹಾಗೂ ಧೀರ್ಘಾವಧಿಗೆ ಶಿಕ್ಷೆಯನ್ನು ತಳ್ಳಿಹಾಕಲಾಗುವುದಿಲ್ಲ ಆದರೆ ಈ ಅಭ್ಯಾಸದ ಮೂಲವಾಗಿರುವ ಕೋರಿಕೆ ಅಂಥ ವ್ಯಕ್ತಿಯ ಅಪೀಲನ್ನು ಕಾಲಾವಧಿಯ ಗಣಿಸಬಹುದಾದ ದೂರದೊಳಗೆ ವಿಲೆ ಮಾಡುವಂಥದಾಗಿರುತ್ತದೆ, ಹಾಗೆಯೇ, ಅವನು ಅಂತಿಮವಾಗಿ ಮುಗ್ಧನೆಂದು ಕಂಡುಬಂದರೆ, ಅವನನ್ನು ಯುಕ್ತವಲ್ಲದ ಅವಧಿಗೆ ಜೈಲಿನಲ್ಲಿ ಉಳಿದಿರಬೇಕಾಗಿರುವುದಿಲ್ಲ.

2. ಎಐಆರ್ 1978 ಎಸ್‌ಸಿ 527

ಸದರಿ ***ಬಾಬುಸಿಂಗ್*** (ಮೇಲಿನ) ಪ್ರಕರಣದಲ್ಲಿ ನ್ಯಾಯಾಧೀಶರು ನೀಡಿದ ತೀರ್ಮಾನಗಳನ್ನು ಅನುಸರಿಸಿ, ಶಿಕ್ಷೆಯ ಅಮಾನತಿನ ಪರಿಹಾರವನ್ನು ಕೋರಿ ಅನುಕ್ರಮ ಅರ್ಜಿಯನ್ನು ಸಲ್ಲಿಸಲು ಅರ್ಜಿದಾರನಿಗೆ ಯಾವುದೇ ಪ್ರತಿಷೇಧವಿಲ್ಲದಿದ್ದರೂ ಹಾಗೂ ಅವನ ಜಾಮೀನನ್ನು ವಿಸ್ತರಿಸದಿದ್ದರೂ, ಅವನು ಬದಲಾದ ಸನ್ನಿವೇಶಗಳನ್ನು ತೋರಿಸಲು ಅವನನ್ನು ಅಗತ್ಯಪಡಿಸಿದ್ದಾಗ್ಯೂ, ಹಿಂದಿನ ತನ್ನ ಅರ್ಜಿ/ಅರ್ಜಿದಾರರ ಪರಿಗಣನೆಯ ಅವಧಿಯಲ್ಲಿ ಅದು ಅಸ್ತಿತ್ವದಲ್ಲಿರಲಿಲ್ಲ ಎಂಬುದನ್ನು ಗಮನಿಸಬಹುದಾಗಿದೆ. ಒಪ್ಪಿಕೊಂಡಿರುವಂತೆ ನಮ್ಮ ಮುಂದಿರುವ ಪ್ರಕರಣದಲ್ಲಿ ಸನ್ನಿವೇಶದಲ್ಲಿ ಯಾವುದೇ ಬದಲಾವಣೆಯಿಲ್ಲ. ಅರ್ಜಿದಾರರು ಪ್ರಸ್ತುತ ಅರ್ಜಿಯಲ್ಲಿ ತಿಳಿಸಿರುವ ಎಲ್ಲವನ್ನೂ ತಮ್ಮ ಹಿಂದಿನ ಅರ್ಜಿಯಲ್ಲಿ ಈಗಾಗಲೇ ಪ್ರಸ್ತಾವಿಸಲಾಗಿದ್ದು, ಅದರ ಗುಣಾರ್ಹತೆಯ ಮೇಲೆ ದಿನಾಂಕ: 25.09.2018 ರಂದು ಈ ನ್ಯಾಯಾಲಯವು ವಿಲೇವಾರಿ ಮಾಡಿತ್ತು.

15. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ವಕೀಲರ ವಾದವು, ಅಪೀಲಿನ ವಿಲೇವಾರಿಗೆ ಕಾರಣವಾದ ವಿಳಂಬ ಇದು ಜಾಮೀನಿನ ಮೇಲಿನ ಅರ್ಜಿದಾರರ ವಿಸ್ತರಣೆಗೆ ಸಂಬಂಧಿಸಿದ್ದಾಗಿದ್ದು ಇದಕ್ಕೆ ಸಿಂಧುವಾದ ಆಧಾರವಿದ್ದು, ಇದನ್ನೂ ಸಹ ಒಪ್ಪಿಕೊಂಡಿಲ್ಲ. ***ಚೆನ್ನ ಬೋಯಣ್ಣ ಕೃಷ್ಣ ಯಾದವ್ –ವಿರುದ್ಧ– ಮಹಾರಾಷ್ಟ್ರ ರಾಜ್ಯ ಮತ್ತು ಮತ್ತೊಬ್ಬರು*** [3] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಸೆರೆವಾಸದ ಅವಧಿಯಾಗಿದ್ದರೂ ಹಾಗೂ/ಅಥವಾ ಅಧಿವಿಚಾರಣೆಯ ಅಂತ್ಯದಲ್ಲಿ ಅವರೊಬ್ಬರಿಂದ ಅಥವಾ ಜೊತೆಯಾಗಿ ಜಾಮೀನನ್ನು ನೀಡುವುದಕ್ಕೆ ಸಂಭವನೀಯ ವಿಳಂಬಗಳು ಸಾಕಷ್ಟಿಲ್ಲದಿದ್ದರೂ, ಆದಾಗುವ ಎರಡೂ ರೀತಿಯ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಬಹುದೆಂದು ತೀರ್ಮಾನಿಸಲು ಬಯಸಿದೆ. ಪ್ರತಿಯೊಂದು ಪ್ರಕರಣವನ್ನು ವಿಳಂಬಕ್ಕೆ ಸಂಬಂಧಿಸಿದ ಅದರ ಗುಣಾರ್ಹತೆಗಳ ಮೇಲೆ ಪರೀಕ್ಷಿಸಬೇಕಾಗುತ್ತದೆ ಹಾಗೂ ಎಲ್ಲಾ ಸಂದರ್ಭಗಳಲ್ಲಿ ಬದಲಾವಣೆಯಿಲ್ಲದೆ ಸಂಭವಿಸುವುದಿಲ್ಲ, ಅದು ಎಲ್ಲಾ ಪ್ರತಿಯೊಂದೂ ಸಂದರ್ಭಗಳನ್ನು ಅವಲಂಬಿಸಿರುತ್ತದೆ.

3. (2007) 1 ಎಸ್‌ಸಿಸಿ 242

ಹಾಗೆಯೇ ಅರ್ಜಿದಾರರ ಪ್ರಯೋಜನಕ್ಕೆ ತಮ್ಮ ಮೂಲಕ ಕೆಲವು ವಸ್ತುವಿಷಯಗಳನ್ನು ಪೂರ್ವಕಲ್ಪನೆ ಮಾಡಿಕೊಳ್ಳಲಾಗುವುದಿಲ್ಲ.

16. ಕಡೆಯದಾಗಿ, ಹಿರಿಯ ನ್ಯಾಯವಾದಿಗಳು, ***ಕಿಶೋರಿ ಲಾಲ್ –ವಿರುದ್ಧ– ರೂಪಾ*** [4] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ ಹಾಗೂ 389ನೇ ಪ್ರಕರಣದ ಅವಶ್ಯಕ ಘಟಕಾಂಶಗಳಲ್ಲಿ ಒಂದನ್ನು ಶಿಕ್ಷೆಯನ್ನು ಕಾರ್ಯಗತಗೊಳಿಸುವ ಅಮಾನತು ಆದೇಶ ಹೊರಡಿಸುವುದಕ್ಕೆ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಲು ಅಪೀಲು ನ್ಯಾಯಾಲಯಕ್ಕೆ ಅಗತ್ಯಪಡಿಸಲಾಗಿದೆಯೆಂದು ನಿವೇದಿಸಿದ್ದಾರೆ. ಅವರು ದಿನಾಂಕ: 25.09.2018ರ ಹಿಂದಿನ ಆದೇಶವು ಅರ್ಜಿಯನ್ನು ವಜಾಗೊಳಿಸುವುದಕ್ಕೆ ಯಾವುದೇ ಕಾರಣಗಳನ್ನು ದಾಖಲಿಸುವುದನ್ನು ಇಲ್ಲದಂತಾಗಿಸಿದೆಯೆಂದು ನಿವೇದಿಸಿದ್ದಾರೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು, ***ಕಿಶೋರಿ ಲಾಲ್ (ಮೇಲಿನ)*** ಪ್ರಕರಣದಲ್ಲಿ ಸದರಿ ತೀರ್ಪಿನ 4ನೇ ಸಂಖ್ಯೆಯ ಕಂಡಿಕೆಯಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 389ನೇ ಪ್ರಕರಣದ ಮೇರೆಗಿನ ಅರ್ಜಿಯೊಂದಿಗೆ ವ್ಯವಹರಿಸುವಾಗ, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸುವ ಅಗತ್ಯತೆಯು, ಸಂಬಂಧಪಟ್ಟ ಸಂಗತಿಗಳು, ಎಚ್ಚರಿಕೆಯ ಪರಿಗಣನೆಯಾಗಿರಬೇಕಾಗುತ್ತದೆಯೆಂಬುದನ್ನು, ಹಾಗೂ ಶಿಕ್ಷೆಯ ಅಮಾನತನ್ನು ನಿರ್ದೇಶಿಸುತ್ತದೆ ಹಾಗೂ ದಿನನಿತ್ಯದ ವಿಷಯವೆಂಬಂತೆ ಜಾಮೀನನ್ನು ನೀಡಬಾರದೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆಯೆಂದು ಅಭಿಪ್ರಾಯಪಡಲು ಬಯಸಿದೆ.

17. ನಮ್ಮ ಮುಂದಿರುವ ಪ್ರಕರಣದಲ್ಲಿ ಮೇಲೆ ಈಗಾಗಲೇ ಅಭಿಪ್ರಾಯಪಟ್ಟಿರುವಂತೆ ದಿನಾಂಕ: 25.09.2018ರ ಆದೇಶ, ಅದರ ಉದ್ಧೃತವನ್ನು ಮರುಹಾಜರುಪಡಿಸಿದ್ದು, ಇದು ಈ ನ್ಯಾಯಾಲಯದ ಮುಂದೆ ಪ್ರಸ್ತಾವಿಸಲಾದ ಎಲ್ಲಾ ಆಧಾರಗಳನ್ನು ಪರಿಗಣಿಸಿದ ನಂತರ, ಮೊದಲಿನ ಅರ್ಜಿಯನ್ನು ಯುಕ್ತ

4. ಎಲ್‌ಎಬ್ಲ್ಯೂಎಸ್ (ಎಸ್‌ಪಿ) 2004–9–9

ಆದೇಶದೊಂದಿಗೆ ವಿಲೆಮಾಡಲಾಗಿದೆಯೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಹಾಗೆಯೇ, ದಿನಾಂಕ: 25.09.2018ರ ಆದೇಶವನ್ನು, ಪರಿಗಣಿಸಲಾಗುವುದಿಲ್ಲ, ಏಕೆಂದರೆ ಇದು ಯಾವುದೆ ಕಾರಣಗಳನ್ನು ದಾಖಲಿಸದ ಆದೇಶವಾಗಿದ್ದು, ಇದು ಅರ್ಜಿದಾರರು ಪುನರುಚ್ಚರಿಸುವುದನ್ನು ಹಾಗೂ ಪ್ರಸ್ತುತ ಅರ್ಜಿಯಲ್ಲೂ ಕೂಡ ಅದೇ ವಾದಗಳನ್ನು ಮರು–ಪ್ರಸ್ತಾವಿಸುವುದನ್ನು ಒತ್ತಿ ಹೇಳುತ್ತದೆ.

18. ಇದನ್ನು ಮುಕ್ತಾಯಗೊಳಿಸುವ ಮೊದಲು, ***ಕಲ್ಯಾಣ್ ಚಂದ್ರ ಸರ್ಕಾರ್ ಹಾಗೂ ಇತರರು –ವಿರುದ್ಧ– ರಾಜೇಶ್ ರಂಜನ್ ಅಲಿಯಾಸ್ ಪಪ್ಪು ಯಾದವ್ ಹಾಗೂ ಮತ್ತೊಬ್ಬರು***[5] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ತಾವು ನೀಡಿದ ತೀರ್ಮಾನವನ್ನು ಉಲ್ಲೇಖಿಸುವುದು ಯುಕ್ತವೆಂದು ಭಾವಿಸುತ್ತಿದ್ದು, ಇದರಲ್ಲಿ 19ನೇ ಸಂಖ್ಯೆಯ ಕಂಡಿಕೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಡಲು ಇಚ್ಛಿಸಿದೆ:

> *"ಪೂರ್ವ ನ್ಯಾಯನಿರ್ಣಯ ಹಾಗೂ ಅಂಥ ಸಮಾನ ತತ್ವಗಳ ತತ್ವಗಳು ಕ್ರಿಮಿನಲ್ ವ್ಯವಹರಣೆಗಳಲಿ ಅನ್ವಯವಾಗದಿದ್ದರೂ, ಇನ್ನೂ ಕೂಡ ನ್ಯಾಯಾಲಯುಗಳು, ನಮ್ಮ ದೇಶದಲ್ಲಿ ಚಾಲ್ತಿಯಲ್ಲಿರುವ ಶ್ರೇಣೀಕೃತ ವ್ಯವಸ್ಥೆಗೆ ಸಂಬಂಧಿಸಿದ ನ್ಯಾಯಿಕ ಶಿಸ್ತಿನ ಸಿದ್ಧಾಂತಕ್ಕೆ ಬದ್ಧವಾಗಿವೆ. ಉನ್ನತ ನ್ಯಾಯಾಲಯ ಅಥವಾ ಸಮನ್ವಯ ಪೀಠದ ನಿರ್ಣಯಗಳು, ನಂತರದ ಹಂತದಲ್ಲಿ ಜಾಮೀನು ಅರ್ಜಿಯನ್ನು ಪರುಸ್ಕರಿಸುವ ನ್ಯಾಯಾಲಯದ ಕೈಗಳಲ್ಲಿದ್ದು ಅದು ಮೊದಲು ತಿರಸ್ಕೃತವಾಗಿದ್ದಾಗ ಗಂಭೀರ ಪರಿಗಣನೆಯನ್ನು ಸ್ವೀಕರಿಸಬೇಕು. ಅಂಥ ಸಂದರ್ಭದಲ್ಲಿ ನ್ಯಾಯಾಲಯಗಳು, ಜಾಮೀನು ಅರ್ಜಿಯನ್ನು ತಿರಸ್ಕರಿಸಿರುವಲ್ಲಿ ಹಿಂದಿನ ಅಥವಾ ಉನ್ನತ ನ್ಯಾಯಾಲಯಗಳೊಂದಿಗೆ ತೂಗಿ ನೋಡುವ ಆಧಾರಗಳಿಗೆ ಯುಕ್ತ ಪ್ರಾಮುಖ್ಯತೆಯನ್ನು*

5. ಎಐಆರ್ 2005 ಎಸ್‌ಸಿ 921

> *ನೀಡಲೇಬೇಕು. ಸಾಮಾನ್ಯವಾಗಿ, ಈ ಮೊದಲು ಪ್ರಸ್ತಾವಿಸಿದ್ದ ವಿವಾದಾಂಶಗಳಿಗೆ ಅದೇ ಆಧಾರಗಳ ಮೇಲೆ ಮತ್ತೆ ವಾದಿಸಬೇಕೆಂದು ಅನುಮತಿಸಿರುವುದಿಲ್ಲ, ಏಕೆಂದರೆ, ಅದು ಊಹೆಗಳಿಗೆ ಹಾಗೂ ನ್ಯಾಯದ ಆಡಳಿತದಲ್ಲಿನ ಅನಿಶ್ಚಿತತೆಗೆ ಕಾರಣವಾಗುತ್ತದೆ. ಅದು ವೇದಿಕೆಯ ಶೋಧನೆಗೆ ಕಾರಣವಾಗಬಹುದು.*

19. ಪ್ರಸ್ತುತ ಪ್ರಕರಣದಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 389ನೇ ಪ್ರಕರಣದ ಮೇರೆಗೆ ಅನುಕ್ರಮ ಜಾಮೀನು ಅರ್ಜಿಗಳನ್ನು ಸಲ್ಲಿಸುವುದಕ್ಕೆ ಯಾವುದೆ ಪ್ರತಿಷೇಧವಿರುವ ಕಾರಣಮಾತ್ರದಿಂದಲೇ, ಸನ್ನಿವೇಶಗಳಲ್ಲಿನ ಯಾವುದೇ ಬದಲಾವಣೆ ಇಲ್ಲದಿರುವಾಗ, ನಂತರದ ಅಂಥ ಅರ್ಜಿಯನ್ನು, ಅದು ಹೊಸ ಅರ್ಜಿಯಾಗಿದ್ದರೂ ಪರಿಗಣಿಸಬೇಕಿದ್ದರೆ ಅಥವಾ ಪುರಸ್ಕರಿಸಬೇಕಿದ್ದರೆ, ಹಿಂದಿನ ಆದೇಶವನ್ನು ಪುನರ್‌ಪರಿಶೀಲಿಸಲು ಕ್ರಮ ಜರುಗಿಸಬಹುದು, ಇದು ನ್ಯಾಯಾಲಯದ ನ್ಯಾಯಿಕ ಶಿಸ್ತಿಗೆ ಬಾಧಕವಾಗುತ್ತದೆ ಹಾಗೂ ವೇದಿಕೆಯ ಶೋಧನೆಯ ಸಾಧ್ಯತೆಗೂ ಕೂಡ ಕಾರಣವಾಗುತ್ತದೆ. ಹಾಗೆಯೇ, ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ, ದಿನಾಂಕ 25.09.2018 ರ ಸವಿವರವಾದ ಹಾಗೂ ಪರಿಗಣಿತ ಆದೇಶದ ಮೂಲಕ ಅದರ ಗುಣಾರ್ಹತೆಯ ಮೇಲೆ ಪರಿಗಣಿಸಿದ್ದರಿಂದ ಅದೇ ಪ್ರಸ್ತುತ ಅರ್ಜಿಗಳ ಮೂಲಕ ಸದೃಶ ಅರ್ಜಿಯನ್ನು ಸಲ್ಲಿಸಲಾಗಿದೆ. ಸನ್ನಿವೇಶಗಳಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ಅಥವಾ ವಿಷಯದಲ್ಲಿ ಹೆಚ್ಚಿನ ಯಾವುದೇ ಪ್ರಗತಿಗಳನ್ನು ತೋರಿಸಲು ಅರ್ಜಿದಾರರು ವಿಫಲವಾಗಿರುವುದರಿಂದ ನಾವು, ಪ್ರಸ್ತುತ ಅರ್ಜಿಯನ್ನು ಪುರಸ್ಕರಿಸಲು ಅರ್ಹವಾಗಿಲ್ಲವೆಂಬ ದೃಷ್ಟಿಕೋನವನ್ನು ಹೊಂದಿರುತ್ತೇವೆ. ತದಾನುಸಾರವಾಗಿ, ವಾದಕಾಲೀನ ಅರ್ಜಿ ಸಂ. 2/2018 ನ್ನು ಗುಣಾರ್ಹತೆಗಳು ಇಲ್ಲದಿರುವುದರಿಂದ ವಜಾಗೊಳಿಸಲಾಗಿದೆ.

---